26	ಶಿವಮೊಗ್ಗ	211	690.00
27	ತುಮಕೂರು	259	818.33
28	ಉಡುಪಿ	172	967.50
29	ಉತ್ತರ ಕನ್ನಡ	89	251.00
30	ಯಾದಗಿರಿ	7	14.00
	ಒಟ್ಟು	**2664**	**10886.33**

ಯೋಜನೆ ಹಾಗೂ ಯೋಜನೇತರ ಗಾತ್ರ

561 (699) ಶ್ರೀ ನರೇಂದ್ರ ಆರ್. (ಹನೂರು) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕಳೆದ ಮೂರು ವರ್ಷದಲ್ಲಿ ರಾಜ್ಯದ ಯೋಜನೆ ಗಾತ್ರವೆಷ್ಟು; ಯೋಜನೇತರ ಗಾತ್ರವೆಷ್ಟು;

ಆ) ರಾಜ್ಯದ ಆಯವ್ಯಯದಲ್ಲಿ ಒದಗಿಸಲು ಉದ್ದೇಶಿಸಲಾದ ಹಣವೆಷ್ಟು, ಬಿಡುಗಡೆ ಮಾಡಲಾದ ಹಣವೆಷ್ಟು, ಎಷ್ಟು ವೆಚ್ಚ ಮಾಡಲಾಗಿದೆ;

ಇ) 2010-11ನೇ ಸಾಲಿನಿಂದ ಈವರೆಗೆ ಎಷ್ಟು ಹಣ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ;

ಈ) 2010-11ನೇ ಸಾಲಿನ ರಾಜ್ಯದ ಋಣಭಾರ ಎಷ್ಟಿತ್ತು; ಈಗ ಎಷ್ಟಿದೆ;

ಶ್ರೀ ಎಸ್. ಶಿವಣ್ಣ (ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಯೋಜನೆ ಮತ್ತು ಯೋಜನೇತರ ಗಾತ್ರ, ಆಯವ್ಯಯದಲ್ಲಿ ಒದಗಿಸಲಾದ ಹಣ ಹಾಗೂ ಆ ವರ್ಷದ ಖರ್ಚು ಈ ಕೆಳಕಂಡಂತಿದೆ.

ಗಾತ್ರ/ಒದಗಿಸಲಾದ ಹಣ **(ರೂ. ಕೋಟಿಗಳಲ್ಲಿ)**

	2010-11	**2011-12**	**2012-13**
ಯೋಜನೆ	27098	34644	40240
ಯೋಜನೇತರ	42965	50674	62502

ಆ)

ವೆಚ್ಚ : (ರೂ. ಕೋಟಿಗಳಲ್ಲಿ)

ಯೋಜನೆ	29505	35219	12025 (ಸೆಪ್ಟೆಂಬರ್ ಅಂತ್ಯದವರೆಗೆ)
ಯೋಜನೇತರ	42429	50537	38073 (ಸೆಪ್ಟೆಂಬರ್ ಅಂತ್ಯದವರೆಗೆ)

ಆರ್ಥಿಕ ಪ್ರತ್ಯಾಯೋಜನೆಯನ್ವಯ ಸರ್ಕಾರದ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆ ಆದೇಶಗಳನ್ನು ಹೊರಡಿಸಲಾಗುವುದರಿಂದ ಬಿಡುಗಡೆಯಾಗಿರುವ ಹಣ ಒಂದೇ ಕಡೆ ಕ್ರೋಢೀಕೃತವಾಗುತ್ತಿಲ್ಲ. ಆದುದರಿಂದ, ಬಿಡುಗಡೆಯಾಗಿರುವ ಹಣದ ಬಗ್ಗೆ ಆರ್ಥಿಕ ಇಲಾಖೆಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.

ಇ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ.

(ರೂ. ಕೋಟಿಗಳಲ್ಲಿ)

ವರ್ಷ	ಕೇಂದ್ರದಿಂದ ಅನುದಾನ	ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು	ಕೇಂದ್ರದಿಂದ ಸಾಲ	ಒಟ್ಟು
2010–11	6868	9506	1504	17878
2012–12 (ಪೂರ್ವ ವಾಸ್ತವಿಕ)	8168	11075	1267	20510

ಈ) 2010–11ನೇ ಸಾಲಿನ ರಾಜ್ಯದ ಋಣಭಾರ ಮತ್ತು ಈಗಿನ ಋಣಭಾರ ಕೆಳಕಂಡಂತಿರುತ್ತದೆ.

(ರೂ. ಕೋಟಿಗಳಲ್ಲಿ)

ವರ್ಷ	ರಾಜ್ಯದ ಋಣಭಾರ (ರೂ. ಕೋಟಿಗಳಲ್ಲಿ)
31.03.2011	95192
31.03.2012 (ಪೂರ್ವ ವಾಸ್ತವಿಕ)	106279